ಶ್ರೀ ಎಸ್.ಎಂ. ಕೃಷ್ಣ : ನಾವು ಅವರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಶಿಫಾರಸ್ಸು ಮಾಡಿದೆವು.

ಶ್ರೀ ಎನ್ ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೇ, ಹಾಗಾದರೆ ನಾಳೆ ಇಂಥದ್ದೇ ಅಧಿಕಾರಿಗಳು ಮುಂದೆ ಬಂದಲ್ಲಿ ಚುನಾವಣೆಗೆ ನಿಲ್ಲಲು ಅವರಿಗೆ ಅಲೋ ಮಾಡುತ್ತೀರಾ?

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಅಂದರೆ ಸರ್ಕಾರಿ ಅಧಿಕಾರಿಗಳಿಗೆ ಈ ಸದನದ ಮೂಲಕ ನಾವು ಒಂದು ಮೆಸೇಜ್ ಕಳಿಸುತ್ತಿದ್ದೇವೆ ಎಂದು ಹೇಳಿದ ಹಾಗಾಯಿತು. ಅದರೆ ಯಾರು ಆಡಳಿತ ಪಕ್ಷದಲ್ಲಿದ್ದಾರೆ ಅವರಿಗೆ ಸ್ಪರ್ಧಿಸಲು ಅವಕಾಶ ಕೊಡುತ್ತೇವೆ ಎಂಬ ಮೆಸೇಜಾ ಇದು? ಈ ರೀತಿ ರಾಂಗ್ ಮೆಸೇಜ್ ರಾಜ್ಯಕ್ಕೆ ರಾಜ್ಯದ ಜನತೆಗೆ ಇಲ್ಲಿಂದ ಹೋಗಬಾರದು.

ಶ್ರೀ ಎಸ್.ಎಂ. ಕೃಷ್ಣ : ಅಖಿಲ ಭಾರತ ಸೇವಾ ನಿಯಮಗಳ ಪ್ರಕಾರ ಯಾವ ನಿಷೇಧವೂ ಇಲ್ಲದೇ ಇದ್ದುದರಿಂದ ಸರ್ಕಾರ ತನ್ನ ಡಿಸ್ಕ್ರಿಶನ್ ಉಪಯೋಗಿಸಿ ಈ ಶಿಫಾರಸ್ಸನ್ನು ಮಾಡಿತು. ಅನಂತರ ಈ ಬಗ್ಗೆ ಕೇಂದ್ರ ಸರ್ಕಾರ ಏನು ತೀರ್ಮಾನ ಮಾಡಿದೆಯೋ ಅದು ಎಲ್ಲರ ಮೇಲೂ ಬದ್ಧವಾಗಿದೆ. ಅಲ್ಲಿಗೆ ಈ ಪ್ರಕರಣ ಮುಗಿಯಿತು.

**ಚನ್ನಗಿರಿ ತಾಲ್ಲೂಕಿನಲ್ಲಿ ಹಸಿರು ಮತ್ತು ಹಳದಿ ಕಾರ್ಡುಗಳನ್ನು ಹೊಂದಿರುವವರ ಕುರಿತು**

360 ( 3384) ಶ್ರೀ ವಡ್ನಾಳ್ ರಾಜಣ್ಣ( ಚನ್ನಗಿರಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಗಿರಿ ತಾಲ್ಲೂಕಿನಲ್ಲಿ ಹಸಿರು ಕಾರ್ಡುಮತ್ತು ಹಳದಿ ಕಾರ್ಡುಗಳ ವ್ಯಾಪ್ತಿಗೆ ಬರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು; (ಪ್ರತ್ಯೇಕ ವಿವರ ನೀಡುವಿರಾ);

ಆ) ಚನ್ನಗಿರಿ ತಾಲ್ಲೂಕಿನಲ್ಲಿ ವಿತರಣೆ ಮಾಡಿದ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು;

ಇ) ಹಸಿರು ಕಾರ್ಡು ನೀಡದೇ ಇರುವ ಕುಟುಂಬಗಳ ಸಂಖ್ಯೆ ಎಷ್ಟು;

ಈ) ಹಸಿರು ಕಾರ್ಡು ವಿತರಿಸದೇ ಇರುವ ಕುಟುಂಬಗಳಿಗೆ ಎಂದು ವಿತರಿಸಲಾಗುವುದು?

ಶ್ರೀ ಡಿ. ಬಿ. ಇನಾಂದಾರ್ ( ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಜನಗಣತಿ ಅಂಕಿ ಅಂಶಗಳ ಆಧಾರದಂತೆ ಚನ್ನಗಿರಿ ತಾಲ್ಲೂಕಿನಲ್ಲಿ 1991ನೇ ಇಸವಿಯಲ್ಲಿದ್ದ ಕುಟುಂಬಗಳ ಸಂಖ್ಯೆ 43485 ಹಾಗೂ 1999ಕ್ಕೆ ಅಂದಾಜು ಕುಟುಂಬಗಳ ಸಂಖ್ಯೆ: 55226( ಪ್ರೊಜೆಕ್ಟೆಡ್). ಆದರೆ ಈ ಕುಟುಂಬಗಳಲ್ಲಿ ಎಷ್ಟು ಕುಟುಂಬಗಳು ಹಸಿರು ಪಡಿತರ ಚೀಟಿ ವ್ಯಾಪ್ತಿಗೆ ಹಾಗೂ ಕೇಸರಿ ಪಡಿತರ ಚೀಟಿ ವ್ಯಾಪ್ತಿಗೆ ಬರುವರೆಂಬ ಬಗ್ಗೆ ಸಮೀಕ್ಷೆ ನಡೆಸಿ ಗುರುತಿಸಿಲ್ಲಾ. ಈವರೆಗೆ ನೀಡಲಾದ ಹಸಿರು ಮತ್ತು ಹಳದಿ ಕಾರ್ಡುಗಳ ವಿವರಗಳು ಕೆಳಗಿನಂತಿದೆ:

ಹಸಿರು ಕಾರ್ಡುಗಳ ಕುಟುಂಬಗಳು 41025

ಹಳದಿ ಕಾರ್ಡುಗಳ ಕುಟುಂಬಗಳು 19818

ಆ) 41025

ಇ) ಈ ಬಗ್ಗೆ ಸಮೀಕ್ಷೆ ನಡೆಸಿ ಹಸಿರು ಕಾರ್ಡು ನೀಡಿಲ್ಲದ ಕುಟುಂಬಗಳ ಸಂಖ್ಯೆಯನ್ನು ಗುರುತಿಸಿಲ್ಲಾ.

ಈ) ಹಸಿರು ಕಾರ್ಡು ಪಡೆಯದ ಅರ್ಹ ಕುಟುಂಬಗಳು ಸಂಬಂಧಿಸಿದ ತಹಶೀಲ್ದಾರರು : ಉಪ ನಿರ್ದೇಶಕರು : ಪಡಿತರ ಅಧಿಕಾರಿಗಳಿಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಅರ್ಜಿ, ವಾಸಸ್ಥಳದ ದೃಢೀಕರಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸಿ ಹಸಿರು ಪಡಿತರ ಚೀಟಿ ಪಡೆಯ ಬಹುದಾಗಿದೆ.

ಶ್ರೀ ಪಡ್ಡಾಳ್ ರಾಜಣ್ಣ : ಮಾನ್ಯ ಅಧ್ಯಕ್ಷರೇ, 1991ರಲ್ಲಿ ಸುಮಾರು 43,485 ಕುಟುಂಬಗಳಿದ್ದವು, 1999ರವರೆಗೆ ಚೆನ್ನಗಿರಿ ತಾಲ್ಲೂಕಿನಲ್ಲಿರುವ ಕುಟುಂಬಗಳ ಸಮೀಕ್ಷೆ ಆಗಿಲ್ಲ. ಅಂದಾಜು 55,226 ಕುಟುಂಬಗಳು ಬರುತ್ತವೆ ಎಂದು ಹೇಳಿದ್ದಾರೆ. ಆದರೆ ಚನ್ನಗಿರಿ ತಾಲ್ಲೂಕಿನಲ್ಲಿ ವಿತರಣೆ ಮಾಡಿದ ಹಸಿರು ಕಾರ್ಡುಗಳು ಕೇವಲ 41,025. ಹಸಿರು ಕಾರ್ಡು ನೀಡದಿರುವ ಕುಟುಂಬಗಳ ಸಂಖ್ಯೆಯೆಷ್ಟು ಎಂಬುದಕ್ಕೆ ಆ ಬಗ್ಗೆ ಇನ್ನೂ ಸಮೀಕ್ಷೆ ಮಾಡಿಲ್ಲ, ಅಂತಹ ಕುಟುಂಬಗಳನ್ನು ಗುರುತಿಸಿಲ್ಲ ಎಂದಿದ್ದಾರೆ. ಹಾಗಾಗಿ ಇದರಲ್ಲಿ ನನ್ನ ಅನುಮಾನ ಏನೆಂದರೆ, ಸರ್ಕಾರವದರು 41,025 ಹಸಿರು ಕಾರ್ಡುಗಳನ್ನು ಏನು ಕೊಟ್ಟಿದ್ದಾರೆ ಇದರಲ್ಲಿ ಸಾಕಷ್ಟು ಬೋಗಸ್ ಕಾರ್ಡುಗಳಿವೆ. ಅವುಗಳನ್ನು ವಾಪಸ್ ಪಡೆಯುವ ಕೆಲಸ ಆಗಬೇಕು. ಇವತ್ತು ನನ್ನ ಕ್ಷೇತರದಲ್ಲಿ ನಾನು ಪ್ರವಾಸ ಮಾಡುವ ಕಾಲದಲ್ಲಿ ನನಗೆ ಗೊತ್ತಾಗಿರುವ ಪ್ರಕಾರ ಯಾರಿಗೆ ಹಸಿರುಕಾರ್ಡು ಸಿಗಬೇಕೋ ಅಂತಹ ಕುಟುಂಬಗಳು ಸಾಕಷ್ಟಿರುವುದರಿಂದ ಆ ಕುಟುಂಬದವರಿಗೆ ಹಸಿರು ಕಾರ್ಡು ಕೊಡುವ ವ್ಯವಸ್ಥೆಯನ್ನು ಜಾಗ್ರತೆಯಾಗಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೇ, ಸದಸ್ಯರ ಕಳಕಳಿ ನನಗೆ ತಿಳಿಯುವಂತ ಕಾರಣದಿಂದ ಇಲ್ಲಿರುವ ಕುಟುಂಬಗಳಿಗಿಂತ ಜಾಸ್ತಿ ಕಾರ್ಡುಗಳನ್ನು ವಿತರಣೆ ಮಾಡಲಾಗಿದೆ. ಇಷ್ಟಾದರೂ ಹಸಿರು, ಕೇಸರಿ ಕಾರ್ಡು ಸಿಗದಿರುವ ಕುಟುಂಬಗಳು ಇನ್ನೂ ಇವೆ ಎಂದು ಅವರು ಹೇಳಿದರು. ಇದರಿಂದ ನಮಗೇನು ಕಂಡುಬರುತ್ತದೆ ಅಂದರೆ ಹಸಿರು ಕಾರ್ಡು ಕೊಡುವ ಹಿಂದಿನ ಪದ್ಧತಿ ಏನಿತ್ತು ಅಂದರೆ ಒಂದು ಡ್ರೈವ್ ಅಂತ ಮಾಡುತ್ತಿದ್ದರು, ಕೇವಲ ಕೆಲವು ಸಮಯ ಮಾತ್ರ ಆದನ್ನು ವಿತರಣೆ ಮಾಡುತ್ತಿದ್ದರು. ಒಂದೊಂದು ತಾಲ್ಲೂಕಿಗೆ ಅಡ್‌ಹಾಕ್ ಬೇಸಿಸ್ ಮೇಲೆ ಅಲಾಟ್‌ಮೆಂಟ್ ಮಾಡುತ್ತಿದ್ದರು. ನಿಜವಾಗಿ ಅರ್ಹರಿರುವವರಿಗೆ ನೋಡಿ ಕೊಡಬೇಕೆಂಬ ಪದ್ಧತಿ ಮೊದಲು ಇರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ it should be a continous process ಎಂಬ ದೃಷ್ಟಿಯಿಂದ 1-1-2000 ರಂದು ಹೊಸ ಸುತ್ತೋಲೆ ಹೊರಡಿಸಿದೆವು. ಅರ್ಹರು ಯಾರಿಗೆ ಹಸಿರುಕಾರ್ಡು ಸಿಕ್ಕಿಲ್ಲ ಅವರಿಗೆ ಅದನ್ನು ಕೊಡಿಸುವ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ ಮತ್ತು ಬೋಗಸ್ ಕಾರ್ಡುಗಳನ್ನು ಎಲಿಮಿನೇಟ್ ಮಾಡಲು ಸಹ ಕಂಪ್ಯೂಟರೈಜೇಶನ್ ಡ್ರೈವ್ ನಡೆಸಿದ್ದೇವೆ. ಬೋಗಸ್ ಕಾರ್ಡುದಾರರು ಎಲ್ಲೆಲ್ಲಿ ಯಾರ್ಯಾರು ಇದ್ದಾರೆ ಅವರಿಗೆ ಶಿಕ್ಷೆ ಮತ್ತು ದಂಡ ವಿಧಿಸಬೇಕೆಂಬುದು ನಮ್ಮ ಸರ್ಕಾರದ ವಿಚಾರವಾಗಿದೆ.

ಅಧ್ಯಕ್ಷರು : ಈಗ ನೋಡಿ, 14 ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿತ್ತು 40 ನಿಮಿಷಗಳಲ್ಲಿ ಮುಗಿದುಹೋಗಿದೆ. ಮಾನ್ಯ ಸದಸ್ಯರುಗಳು ಈ ರೀತಿಯಲ್ಲಿ ಸಹಕರಿಸಿದರೆ ನಾವು ಕೆಲಸಕಾರ್ಯಗಳನ್ನು ಪೂರ್ಣ ಮಾಡಲು ಬಹಳ ಅನುಕೂಲವಾಗುತ್ತದೆ.

ಆ) ತಡೆಹಿಡಿಯಲಾದ ಪ್ರಶ್ನೆಗಳು